# ಕರ್ನಾಟಕ ಲೋಕಾಯುಕ್ತ

**ಸಂ.ಕಂಪ್ಲೇಂಟ್/ಉಪಲೋಕ್/ಬಿಜಿಎಮ್/1568/2021**
**ಪಿಓ. ಎ.ಆರ್.ಇ–6 (ಮಂಡನಾಧಿಕಾರಿಗಳ ಶಾಖೆ)**

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:20/04/2022.

**ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರ ಅನ್ವಯ ಶಿಫಾರಸ್ಸು ವರದಿ**

**ವಿಷಯ: ಶ್ರೀ. ಮಹಾಂತಗೌಡ ಮಾಲಿಬಿರಾದಾರ ಬಿನ್ ಅಯ್ಯಪ್ಪ, ಗ್ರಾಮಲೆಕ್ಕಾಧಿಕಾರಿ, ಗೋನಾಳ ಸಾಜಾ (ಗೋನಾಳ, ವಡೆಯರ ಮಲ್ಲಪುರ, ಗುಲಗಂಜಿಕೊಪ್ಪ), ಲಕ್ಷ್ಮೇಶ್ವರ ತಹಶೀಲ್ದಾರ ಕಚೇರಿ, ಗದಗ ಜಿಲ್ಲೆರವರು ದುರ್ನಡತೆ / ದುರ್ವತನೆ ತೋರಿದ ಬಗ್ಗೆ.**

*****

1. ಗದಗ ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಆರಕ್ಷಕ ಉಪಾಧೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ **ಶ್ರೀ. ಮಹಾಂತಗೌಡ ಮಾಲಿಬಿರಾದಾರ ಬಿನ್ ಅಯ್ಯಪ್ಪ, ಗ್ರಾಮಲೆಕ್ಕಧಿಕಾರಿ, ಗೋನಾಳ ಸಾಜಾ (ಗೋನಾಳ, ವಡೆಯರ ಮಲ್ಲಪುರ, ಗುಲಗಂಜಿಕೊಪ್ಪ), ಲಕ್ಷ್ಮೇಶ್ವರ ತಹಶೀಲ್ದಾರ ಕಚೇರಿ, ಗದಗ ಜಿಲ್ಲೆ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ), **ಶ್ರೀ ಮಂಜುನಾಥ ಬಿನ್ ಬಸವರಾಜ ಮಾದರ, ಗುಲಗಂಜಿ ಕೊಪ್ಪ ವಾಸಿ, ಲಕ್ಷ್ಮೇಶ್ವರ ತಾಲೂಕು,** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಅವರ ಕೆಲಸದ ನಿಮಿತ್ತ ಬೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು, ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 7(2)ರ ಅನ್ವಯ ತನಿಖೆ ಕೈಗೊಂಡಿದೆ.

**2. <u>ಪ್ರಕರಣದ ಸಂಕ್ಷಿಪ್ತ ಸಾರಾಂಶ:–</u>**

i) ದೂರುದಾರರಾದ **ಶ್ರೀ ಮಂಜುನಾಥ ಬಿನ್ ಬಸವರಾಜ ಮಾದರ,** ಇವರ ಅಜ್ಜ ಸಿದ್ದಪ್ಪ ರುದ್ರಪ್ಪ ಇವರು ಮೃತರಾಗಿದ್ದು, ಇವರಿಗೆ 05 ಜನ ಸಹೋದರರು ಮತ್ತು ಒಬ್ಬ ತಂಗಿ ಇದ್ದು, ಇವರ ಹಾಗೂ ಇವರ ಅಜ್ಜಿ ಸೋಮವ್ವ ಇವರಿಗೆ ಮದ್ಯ ಗುಲಗಂಜಿಕೊಪ್ಪ ಗ್ರಾಮದ ರಿ.ಸ.ನಂ: 1) 85/1 ರಲ್ಲಿ 00–27 ಗುಂಟೆ, 2) 79/2 ರಲ್ಲಿ 2 ಎಕರೆ, 3) 79/3 ರಲ್ಲಿ 2 ಎಕರೆ 3 ಗುಂಟೆ, 4) ಸ.ನಂ. 76/1 ರಲ್ಲಿ 1 ಎಕರೆ 39 ಗುಂಟೆ, 5) 76/3 ರಲ್ಲಿ 1 ಎಕರೆ 39

ಗುಂಟೆ ಪಿತ್ರಾರ್ಜಿತ ಜಮೀನುಗಳಿದ್ದು, ಸದರಿ ಜಮೀನುಗಳ ಪೋಡಿ ಸಂಬಂಧ ಲಕ್ಷ್ಮೇಶ್ವರ ನ್ಯಾಯಾಲದಲ್ಲಿ ಓ.ಎಸ್.ನಂ:6/2018 ರಲ್ಲಿ ಡಿಕ್ರಿ ಆದೇಶ ಪಡೆದುಕೊಂಡು ಅದರಂತೆ ಜಮೀನುಗಳನ್ನು ಅಳತೆ ಮಾಡಿ, ಪೋಡಿ ಮಾಡಿ ಅವರವರ ಹೆಸರಿನಲ್ಲಿ ಉತಾರ ಪಡೆಯುವ ಕೆಲಸಕ್ಕಾಗಿ ದೂರುದಾರರ ಅಜ್ಜಂದಿರುಗಳಿಗೆ ಹಾಗೂ ಅಜ್ಜಿಗೆ ಹೋಗಿ ಬರಲು ಆಗದ ಕಾರಣ, ಸದರಿ ಕೆಲಸ ಮಾಡಿಸಿ ಕೊಡಲು ಅವರು ದೂರುದಾರರಿಗೆ ತಿಳಿಸಿರುತ್ತಾರೆ. ಆ ಬಗ್ಗೆ ದೂರುದಾರರು ಎದುರುದಾರರನ್ನು ಭೇಟಿಯಾಗಿ ವಿಚಾರಿಸಿದಾಗ ತಾವೇ ಕೆಲಸ ಮಾಡಿಸಿಕೊಡಿಸುವುದಾಗಿ ಹೇಳಿ ಒಂದು ಖಾತೆಗೆ 2,500/- ರೂ. ಆಗುತ್ತದೆಂದು ತಿಳಿಸಿರುತ್ತಾರೆ. ದೂರುದಾರರು ಅರ್ಜಿ ಎಲ್ಲಿ ಕೊಡಬೇಕು ಎಂದು ಕೇಳಿದಾಗ ಲಕ್ಷ್ಮೇಶ್ವರ ನೆಮ್ಮದಿ ಕೇಂದ್ರದಲ್ಲಿ ಕೆಲಸ ಮಾಡುವ ಪ್ರಕಾಶ್‌ರವರನ್ನು ಭೇಟಿಯಾಗಲು ತಿಳಿಸಿರುತ್ತಾರೆ. ಅದರಂತೆ ದೂರುದಾರರು ದಿನಾಂಕ: 02/11/2019 ರಂದು ಅವರನ್ನು ಭೇಟಿಯಾಗಿ ಜಮೀನು ಮೋಜಣಿ ಮಾಡಿ, ನಕಾಶೆ ತಯಾರಿಸಿ, ಉತಾರ ಮಾಡಿಕೊಡಲು 2 ಎಕರೆ ಒಳಗಿನ ಒಂದು ಖಾತೆಗೆ 1,400/- ರೂ. ಮತ್ತು 2 ಎಕರೆ ಮೇಲ್ಪಟ್ಟ ಖಾತೆಗೆ 1,600/- ಆಗುತ್ತದೆ ಎಂದು ತಿಳಿಸಿ, ದೂರುದಾರರ ಕೆಲಸಕ್ಕಾಗಿ 7,200/- ರೂ. ಫೀ ಆಗುತ್ತದೆ ಎಂದು ಹೇಳಿರುತ್ತಾರೆ. ದಿನಾಂಕ: 06/11/2019 ರಂದು ದೂರುದಾರರು ಅವರ ಮೊಬೈಲ್‌ ನಿಂದ ಎದುರುದಾರರ ಮೊಬೈಲ್ ನಂ: 89712 72814 ಕ್ಕೆ ಬೆಳಿಗ್ಗೆ 9 ಗಂಟೆಗೆ ಕರೆಮಾಡಿದಾಗ, ಎದುರುದಾರರು ಎಲ್ಲಾ ಜಮೀನುಗಳ ಪೋಡಿ ಮಾಡಿಸಿ, ನಕಾಶೆ ತಯಾರಿಸಿ, ಉತಾರ ಪೊರೈಸುವ ಎಲ್ಲಾ ಕೆಲಸಗಳನ್ನು ಮಾಡಿಸಿಕೊಡುವುದಾಗಿ ಹೇಳಿರುತ್ತಾರೆ. ದೂರುದಾರರು ನೆಮ್ಮದಿ ಕೇಂದ್ರದ ಪ್ರಕಾಶ್‌ರವರು ಹೇಳಿದ 7,200/- ರೂ. ಗಳಲ್ಲಿ ಕಡಿಮೆ ಮಾಡಿ ಎಂದು ಕೇಳಿಕೊಂಡಾಗ, ಎದುರುದಾರರು ಕನಿಷ್ಠ 7,000/- ರೂ.ಗಳನ್ನಾದರೂ ಕೊಡುವಂತೆ ತಿಳಿಸಿರುತ್ತಾರೆ. ಸದರಿ ಸಂಭಾಷಣೆಯನ್ನು ದೂರುದಾರರು ಅವರ ಮೊಬೈಲ್‌ನಲ್ಲಿ ಧ್ವನಿ ಮುದ್ರಿಸಿಕೊಂಡಿದ್ದು ಇರುತ್ತದೆ. ದಿ: 08/11/2019 ರಂದು ಬೆಳಿಗ್ಗೆ 11.30 ಗಂಟೆಗೆ ದೂರುದಾರರು ಎದುರುದಾರರನ್ನು ಭೇಟಿ ಮಾಡಿದಾಗ, ಎದುರುದಾರರು ನ್ಯಾಯಾಲಯದ ಆದೇಶದ ಪ್ರತಿ ಹಾಗೂ ಇತರೆ ದಾಖಲೆಗಳನ್ನು ಮತ್ತು 3,000/- ರೂ.ಗಳನ್ನು ಎದುರುದಾರರಿಗೆ ನೀಡಿ, ಇನ್ನುಳಿದ 4,000/- ರೂ.ಗಳನ್ನು ಇನ್ನೆರಡು ದಿನಗಳಲ್ಲಿ ತಂದು ಕೊಡುವುದಾಗಿ ತಿಳಿಸಿರುತ್ತಾರೆ. ಎದುರುದಾರರು ಇನ್ನು ಹೆಚ್ಚಿಗೆ ಹಣ ಕೊಡಬೇಕಾದ್ದಲ್ಲಿ ಕೊಡಬೇಕೆಂದು ದೂರುದಾರರಿಗೆ ತಿಳಿಸಿರುತ್ತಾರೆ. ಸದರಿ ಸಂಭಾಷಣೆಯನ್ನು ದೂರುದಾರರು ಅವರ ಮೊಬೈಲ್‌ನಲ್ಲಿ ಧ್ವನಿ ಮುದ್ರಿಸಿಕೊಂಡಿದ್ದು ಇರುತ್ತದೆ.

ದಿನಾಂಕ: 12/11/2019 ರಂದು ಎದುರುದಾರರು ದೂರುದಾರರು ಕೊಟ್ಟ ದಾಖಲಾತಿಗಳನ್ನು ಮುಂದಿನ ಕ್ರಮಕ್ಕಾಗಿ ಸಂಬಂಧಿಸಿದವರಿಗೆ ಸಲ್ಲಿಸದೆ ಅವರ ಬಳಿಯೇ ಇಟ್ಟುಕೊಂಡಿದ್ದೂ ಅಲ್ಲದೆ, ಇನ್ನು 4,000/- ರೂ.ಗಳನ್ನು ನೀಡಬೇಕೆಂದು ಒತ್ತಾಯಿಸಿರುತ್ತಾರೆ. 4,000/- ರೂ. ನೀಡಿದ ನಂತರವಷ್ಟೇ ಕೆಲಸ ಮಾಡಿಸಿಕೊಡುವ ಉದ್ದೇಶ ಹೊಂದಿರುವುದು ಸ್ಪಷ್ಟವಾಗಿದ್ದುದರಿಂದ, ದೂರುದಾರರು ಸುಮಾರು ದಿನಗಳು ಕಾಯ್ದರೂ ಎದುರುದಾರರು ಕೆಲಸ ಮಾಡಿಕೊಡದೆ ಇರುವುದರಿಂದ ದೂರುದಾರರು ದಿ: 13/11/2019ರಂದು ಗದಗ ಎಸಿಬಿ ಪೊಲೀಸ್ ಠಾಣೆಯ ಆರಕ್ಷಕ ಉಪಾದೀಕ್ಷಕರಿಗೆ ಲಿಖಿತ ದೂರನ್ನು ಸಲ್ಲಿಸಿದ್ದು, ಸದರಿ ಠಾಣೆಯ ಠಾಣಾಧಿಕಾರಿಗಳು ಅವರ ಠಾಣೆಯ ಗುನ್ನೆ ನಂ: 16/2019 ರಲ್ಲಿ ಕಲಂ 7(ಎ) ಲಂಚ ಪ್ರತಿಬಂಧಕ ಕಾಯಿದೆ 1988 ರಲ್ಲಿ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುತ್ತಾರೆ.

ii) ದಿ: 13/11/2019ರಂದು ಜಪ್ತಿಪೂರ್ವ ಪಂಚನಾಮೆ ಸಮಯದಲ್ಲಿ ತನಿಖಾಧಿಕಾರಿಗಳು ಇಬ್ಬರು ಪಂಚರನ್ನು ಠಾಣೆಗೆ ಕರೆಯಿಸಿ ದೂರುದಾರರನ್ನು ಪರಿಚಯಿಸಿ, ಪಂಚರಿಗೆ ದೂರಿನ ಸಂಕ್ಷಿಪ್ತ ಮಾಹಿತಿಯನ್ನು ನೀಡಿದ ನಂತರ ಪಂಚಸಾಕ್ಷಿದಾರರು ಪಂಚರಾಗಿ ಸಹಕರಿಸಲು ಒಪ್ಪಿಕೊಂಡಿರುತ್ತಾರೆ. ದೂರುದಾರರು ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟ ಸಂಭಾಷಣೆಯನ್ನು ಧ್ವನಿಮುದ್ರಿಸಿಕೊಂಡಿದ್ದ ಮೊಬೈಲ್‌ನ್ನು ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿದ್ದು, ಅದರಲ್ಲಿ ದಿ: 06/11/2019 ಮತ್ತು 08/11/2019ರಂದು ನಡೆದ ಸಂಭಾಷಣೆಯನ್ನು ಧ್ವನಿಮುದ್ರಿಸಿಕೊಂಡಿದ್ದು, ಆ ಎರಡು ದಿನದ ಸಂಭಾಷಣೆಯನ್ನು ಎಲ್ಲರಿಗೂ ಕೇಳಿಸಿ, ಪಂಚನಾಮೆಯಲ್ಲಿ ಲಿಪಿಕರಣಗೊಳಿಸಿ, ನಂತರ ಲ್ಯಾಪ್‌ಟಾಪ್ ಮೂಲಕ ಎರಡು ಸಿ.ಡಿ.ಗಳಿಗೆ ವರ್ಗಾಯಿಸಿರುತ್ತಾರೆ. ತನಿಖಾಧಿಕಾರಿಯವರು ಆ ಸಿ.ಡಿ.ಗಳನ್ನು ವಶಕ್ಕೆ ಪಡೆದಿರುತ್ತಾರೆ. ತನಿಖಾಧಿಕಾರಿಯ ಮುಂದೆ ಎದುರುದಾರರಿಗೆ ಇನ್ನುಳಿದ ಲಂಚದ ಹಣವಾಗಿ ನೀಡಬೇಕಾಗಿರುವ 4,000/- ರೂ. (2,000/- ರೂ. ಮುಖಬೆಲೆಯ 1 ನೋಟು, 500/- ರೂ. ಮುಖಬೆಲೆಯ 4 ನೋಟುಗಳನ್ನು) ದೂರುದಾರರು ಹಾಜರುಪಡಿಸಿರುತ್ತಾರೆ. ತನಿಖಾಧಿಕಾರಿಯ ಸೂಚನೆಯಂತೆ ಪಂಚಸಾಕ್ಷಿ-1ರವರು ಹೇಳಿದಂತೆ ಪಂಚಸಾಕ್ಷಿ-2 ನೋಟುಗಳ ವಿವರಗಳನ್ನು ಹಾಳೆಯಲ್ಲಿ ಮತ್ತು ಸಿಬ್ಬಂದಿ ಪಂಚನಾಮೆಯಲ್ಲಿ ನಮೂದಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯವರ ಸೂಚನೆಯಂತೆ ಸಿಬ್ಬಂದಿ ಸದರಿ ನೋಟುಗಳಿಗೆ ಫಿನಾಪ್ತಲಿನ್ ಪುಡಿಯನ್ನು ಲೇಪಿಸಿರುತ್ತಾರೆ. ನಂತರ,

ತನಿಖಾಧಿಕಾರಿಯವರು ಸೂಚಿಸಿದಂತೆ ಪಂಚಸಾಕ್ಷಿ-2ರವರು ಪುಡಿಲೇಪಿತ ನೋಟುಗಳನ್ನು ದೂರುದಾರರು ಧರಿಸಿದ್ದ ಶರ್ಟಿನ ಜೇಬಿನಲ್ಲಿಟ್ಟಿರುತ್ತಾರೆ.

iii) ತನಿಖಾಧಿಕಾರಿಯು ದೂರುದಾರರಿಗೆ ಎದುರುದಾರರ ಬಳಿಹೋಗಿ ನಿಮ್ಮ ಕೆಲಸದ ಬಗ್ಗೆ ವಿಚಾರಿಸಿ, ಆಗ ಎದುರುದಾರರು ಲಂಚದ ಹಣ ಕೇಳಿದರೆ, ನಿಮ್ಮಲ್ಲಿರುವ ಪುಡಿಲೇಪಿತ ನೋಟುಗಳನ್ನು ಎದುರುದಾರರಿಗೆ ಕೊಡಬೇಕೆಂದು ಆ ನೋಟುಗಳನ್ನು ಎದುರುದಾರರು ಸ್ವೀಕರಿಸಿ ಎಲ್ಲಿ ಇಟ್ಟುಕೊಳ್ಳುತ್ತಾರೆಂಬುದನ್ನು ಗಮನಿಸಿ, ನಂತರ ಅಲ್ಲಿಂದ ಹೊರಬಂದು ತಮ್ಮ ಕೈನಿಂದ ಮುಖವನ್ನು ಒರೆಸಿಕೊಳ್ಳುವುದರ ಮೂಲಕ ಸೂಚನೆ ನೀಡಬೇಕೆಂದು ಮತ್ತು ನೆರಳುಸಾಕ್ಷಿಗೆ ದೂರುದಾರರ ಜೊತೆ ಹೋಗಿ ಅಲ್ಲಿ ನಡೆಯುವ ವಿದ್ಯಮಾನಗಳನ್ನು ಗಮನಿಸುವಂತೆ ತಿಳಿಸಿರುತ್ತಾರೆ ಹಾಗೂ ತನಿಖಾಧಿಕಾರಿಯವರು ದೂರುದಾರರಿಗೆ ಧ್ವನಿಮುದ್ರಕವನ್ನು ನೀಡಿ ಎದುರುದಾರರ ಬಳಿ ಹೋಗುವಾಗ ಅದನ್ನು ಚಾಲನಾ ಸ್ಥಿತಿಯಲ್ಲಿಟ್ಟುಕೊಳ್ಳುವಂತೆ ತಿಳಿಸಿರುತ್ತಾರೆ. ಎಲ್ಲಾ ಔಚಿತ್ಯಪೂರ್ವ ನಡವಳಿಕೆಗಳನ್ನು ದೂರುದಾರರು, ನೆರಳುಸಾಕ್ಷಿ ಹಾಗೂ ಪಂಚರ ಸಮಕ್ಷಮ ನಿರ್ವಹಿಸಿರುತ್ತಾರೆ.

iv) ದಿ:13/11/2019 ರಂದು ದೂರುದಾರರು, ನೆರಳುಸಾಕ್ಷಿ, ಪಂಚಸಾಕ್ಷಿ ಮತ್ತು ಸಿಬ್ಬಂದಿಗಳೊಂದಿಗೆ ತನಿಖಾಧಿಕಾರಿಯವರು ಮಧ್ಯಾಹ್ನ 1.30 ಗಂಟೆಗೆ ಎದುರುದಾರರ ಕಚೇರಿಯ ಬಳಿ ಬಂದಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರಿಗೆ ಮತ್ತು ನೆರಳುಸಾಕ್ಷಿಗೆ ಮತ್ತೊಮ್ಮೆ ಸೂಚನೆಗಳನ್ನು ನೆನಪಿಸಿ, ಎದುರುದಾರರ ಬಳಿ ಕಳುಹಿಸಿಕೊಟ್ಟಿರುತ್ತಾರೆ. ದೂರುದಾರರು ನೆರಳುಸಾಕ್ಷಿಯೊಂದಿಗೆ ಎದುರುದಾರರ ಕೊಠಡಿಗೆ ಹೋಗಿ ನೋಡಿದಾಗ, ಎದುರುದಾರರು ಅವರ ಕೊಠಡಿಯಲ್ಲಿ ಇರದ ಕಾರಣ ದೂರುದಾರರು ಅವರಿಗೆ ಫೋನ್ ಮಾಡಿ ವಿಚಾರಿಸಿದಾಗ 5 ನಿಮಿಷದಲ್ಲಿ ಬರುವುದಾಗಿ ಹೇಳಿ ಅವರ ಕಚೇರಿಗೆ ಬಂದಿರುತ್ತಾರೆ. ದೂರುದಾರರು ನೆರಳುಸಾಕ್ಷಿಯೊಂದಿಗೆ ಅವರನ್ನು ಭೇಟಿಮಾಡಿ ಜಮೀನು ಪೋಡಿ ಮಾಡಿಸುವ ಕೆಲಸದ ಬಗ್ಗೆ ವಿಚಾರಿಸಿದಾಗ, ಎದುರುದಾರರು ಕೈಸನ್ನೆ ಮೂಲಕ ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದು, ಆಗ ದೂರುದಾರರು ಅವರ ಬಳಿಯಿದ್ದ ಪುಡಿಲೇಪಿತ ನೋಟುಗಳನ್ನು ಅವರಿಗೆ ನೀಡಿದಾಗ, ಅವರು ಆ ಹಣವನ್ನು ಬಲಗೈನಿಂದ ಪಡೆದು ಅವರ ಶರ್ಟ್ ಜೇಬಿನಲ್ಲಿಟ್ಟುಕೊಂಡಿರುತ್ತಾರೆ. ನಂತರ, ಸುಮಾರು ಮಧ್ಯಾಹ್ನ 1.40 ಗಂಟೆಗೆ ದೂರುದಾರರು ಕಚೇರಿಯಿಂದ ಹೊರಬಂದು ಅವರ ಮುಖವನ್ನು ಒರೆಸಿಕೊಳ್ಳುವ ಮೂಲಕ ಸೂಚನೆ ನೀಡಿರುತ್ತಾರೆ. ಆಗ ತನಿಖಾಧಿಕಾರಿಯವರು ಅವರ ತಂಡದೊಂದಿಗೆ ಎದುರುದಾರರ ಕಚೇರಿಯ ಬಳಿ ಬಂದಾಗ ದೂರುದಾರರು ಕಚೇರಿಯ ಒಳಗೆ ಕುಳಿತಿದ್ದ ವ್ಯಕ್ತಿಯನ್ನು ತೋರಿಸಿ,

ಇವರೇ ಎದುರುದಾರರು ಎಂದು ತಿಳಿಸಿದ ಮೇರೆಗೆ ತನಿಖಾಧಿಕಾರಿಯು ಅವರಿಗೆ ಗುರುತಿನ ಚೀಟಿಯನ್ನು ತೋರಿಸಿ ತನಿಖೆಗೆ ಸಹಕರಿಸುವಂತೆ ತಿಳಿಸಿರುತ್ತಾರೆ.

ತನಿಖಾಧಿಕಾರಿಯವರ ಸೂಚನೆಯಂತೆ ಸಿಬ್ಬಂದಿ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿ, ಆ ದ್ರಾವಣವನ್ನು ಏಳು ಬಟ್ಟಲುಗಳಲ್ಲಿ ತೆಗೆದುಕೊಂಡು ಒಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಎದುರುದಾರರ ಬಲಗೈ ಬೆರಳುಗಳನ್ನು ಅದ್ದಿಸಿ ತೊಳೆಸಿದಾಗ ಆ ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಎರಡನೇ ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಎದುರುದಾರರ ಎಡಗೈ ಬೆರಳುಗಳನ್ನು ಅದ್ದಿಸಿ ತೊಳೆಸಿದಾಗ ಆ ದ್ರಾವಣವು ಯಾವುದೇ ಬಣ್ಣಕ್ಕೆ ಬದಲಾವಣೆ ಆಗಿರುವುದಿಲ್ಲ. ತನಿಖಾಧಿಕಾರಿಯು ಎದುರುದಾರರಿಗೆ ದೂರುದಾರರಿಂದ ಪಡೆದ ಲಂಚದ ಹಣದ ಬಗ್ಗೆ ವಿಚಾರಿಸಿದಾಗ ಎದುರುದಾರರು ಆ ಹಣವು ಶರ್ಟಿನ ಜೇಬಿನಲ್ಲಿರುವುದಾಗಿ ತಿಳಿಸಿದ್ದು, ತನಿಖಾಧಿಕಾರಿಯು ಪಂಚಸಾಕ್ಷಿ-1ರವರಿಗೆ ಆ ಹಣವನ್ನು ತೆಗೆದು ಹಾಜರುಪಡಿಸುವಂತೆ ಸೂಚಿಸಿದ ಮೇರೆಗೆ ಪಂಚಸಾಕ್ಷಿ-1ರವರು ಆ ಹಣವನ್ನು ತೆಗೆದು ಆ ನೋಟುಗಳ ವಿವರಗಳನ್ನು ಪ್ರಾಯೋಗಿಕ ಪಂಚನಾಮೆಯಲ್ಲಿ ನಮೂದಿಸಿದ ಹಾಳೆಗೆ ಮತ್ತು ಪಂಚನಾಮೆಗೆ ತಾಳೆಮಾಡಿ ನೋಡಿದಾಗ, ಆ ನೋಟುಗಳು ತಾಳೆಯಾದ್ದರಿಂದ ತನಿಖಾಧಿಕಾರಿಯು ಆ ನೋಟುಗಳನ್ನು ವಶಕ್ಕೆ ಪಡೆದಿರುತ್ತಾರೆ.

ಮೂರನೇ ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಪಂಚಸಾಕ್ಷಿ-1ರವರ ಬಲಗೈ ಬೆರಳುಗಳನ್ನು ಅದ್ದಿಸಿ ತೊಳೆಸಿದಾಗ, ಆ ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ನಾಲ್ಕನೇ ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಪಂಚಸಾಕ್ಷಿ-1ರವರ ಎಡಗೈ ಬೆರಳುಗಳನ್ನು ಅದ್ದಿಸಿ ತೊಳೆಸಿದಾಗ, ಆ ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಐದನೇ ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ದೂರುದಾರರ ಬಲಗೈ ಬೆರಳುಗಳನ್ನು ಅದ್ದಿಸಿ ತೊಳೆಸಿದಾಗ, ಆ ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಆರನೇ ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ದೂರುದಾರರ ಎಡಗೈ ಬೆರಳುಗಳನ್ನು ಅದ್ದಿಸಿ ತೊಳೆಸಿದಾಗ ಆ ದ್ರಾವಣವು ಯಾವುದೇ ಬಣ್ಣಕ್ಕೆ ಬದಲಾವಣೆ ಆಗಿರುವುದಿಲ್ಲ. ತನಿಖಾಧಿಕಾರಿಯು ಮೇಲ್ಕಂಡ ಎಲ್ಲಾ ದ್ರಾವಣಗಳನ್ನು ಪ್ರತ್ಯೇಕವಾಗಿ ವಶಪಡಿಸಿಕೊಂಡಿರುತ್ತಾರೆ.

ತನಿಖಾಧಿಕಾರಿಯವರು ಎದುರುದಾರರಿಗೆ ಬದಲಿ ಶರ್ಟಿನ ವ್ಯವಸ್ಥೆಮಾಡಿ ಅವರು ಧರಿಸಿದ್ದ ಶರ್ಟಿನ ಜೇಬಿನ ಒಳಭಾಗವನ್ನು ಏಳನೇ ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಅದ್ದಿಸಿ ತೊಳೆದಾಗ, ಆ ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ

ತಿರುಗಿರುತ್ತದೆ. ತನಿಖಾಧಿಕಾರಿಯವರು ಆ ದ್ರಾವಣವನ್ನು ಮತ್ತು ಶರ್ಟ್‌ನ್ನು ವಶಕ್ಕೆ ಪಡೆದಿರುತ್ತಾರೆ

ತನಿಖಾಧಿಕಾರಿಯವರು ಎದುರುದಾರರಿಗೆ ಸಮಜಾಯಿಷಿ ಬರೆದುಕೊಡುವಂತೆ ತಿಳಿಸಿದಾಗ, ಎದುರುದಾರರು ಅವರ ಸಮಜಾಯಿಷಿಯಲ್ಲಿ "ತಹಶಿಲ್ದಾರ್ ಲಕ್ಷ್ಮೇಶ್ವರ ಕಾರ್ಯಾಲಯದಲ್ಲಿ ಜಾತಿ, ಆದಾಯ ಮತ್ತು ಮ್ಯುಟೇಷನ್ ಕೆಲಸಕ್ಕಾಗಿ ಬಂದಿದ್ದಾಗ ದಾಳಿಯಾಗಿದ್ದು, ದೂರುದಾರರು ಅವರ ಪೋಡಿಗಾಗಿ ಅರ್ಜಿ ಸಲ್ಲಿಸುವುದು ಇರುತ್ತದೆ. ಅವರು ಹಣ ಕೇಳಲಾರದೆ ತಂದು ಜೇಬಿನಲ್ಲಿ ಇಟ್ಟಿದ್ದರು. ಇದಕ್ಕಿಂತ ಮುಂಚೆ ಮೊಬೈಲ್ ಕರೆಮಾಡಿ ಕೇಳಿದಾಗ 7,200/- ಅರ್ಜಿ ಫೀ ಆಗಿರುತ್ತದೆ, ಅರ್ಜಿ ಹಾಕಿಸಿ ಅಂತ ಹೇಳಿದ್ದೆ, ನಮಗೆ ತಿಳಿಯುವುದಿಲ್ಲ ನೀವೇ ಮಾಡಿಸಿಕೊಡಿ ಎಂದು ಕೇಳಿದ್ದರು. ನಾನು ತಿರಸ್ಕರಿಸಿದಾಗ ಮತ್ತೆ ಮತ್ತೆ ಕೇಳಿಕೊಂಡಿದ್ದರು, ಆಗ ಹಣ ತಂದುಕೊಟ್ಟಿದ್ದರು ಅಂತ ಹೇಳಿ" ಬರೆದುಕೊಟ್ಟಿರುತ್ತಾರೆ. ಎದುರುದಾರರು ನೀಡಿದ ಸಮಜಾಯಿಷಿಯನ್ನು ದೂರುದಾರರು ಮತ್ತು ನೆರಳುಸಾಕ್ಷಿ ಅಲ್ಲಗಳೆದಿರುತ್ತಾರೆ ಹಾಗೂ ಎದುರುದಾರರು ಕೆಲಸವನ್ನು ಸಂಪೂರ್ಣ ಮಾಡಿಸಿಕೊಡುವುದಾಗಿ ಹೇಳಿ, ಈ ಮೊದಲು 3,000/- ರೂ. ಪಡೆದು, ಇನ್ನುಳಿದ 4,000/- ರೂ. ತಂದುಕೊಡಲು ತಿಳಿಸಿದ್ದು, ಆ ಪ್ರಕಾರ 4,000/- ರೂ. ಕೊಟ್ಟಿರುತ್ತೇನೆ ಎಂದು ದೂರುದಾರರು ಹೇಳಿರುತ್ತಾರೆ. ತನಿಖಾಧಿಕಾರಿಯವರು ಪ್ರಕರಣಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ವಶಪಡಿಸಿಕೊಂಡಿರುತ್ತಾರೆ.

ತನಿಖಾಧಿಕಾರಿಯವರು ಕಚೇರಿಯಲ್ಲಿ ಹಾಜರಿದ್ದ ಶ್ರೀ. ಪ್ರಶಾಂತ್ ಅಪ್ಪೂ ಸಾಬ್ ಸನದಿರವರಿಗೆ ದೂರುದಾರರು ದಿ: 06/11/2019ರಂದು ಮತ್ತು 08/11/2019ರಂದು ಧ್ವನಿಮುದ್ರಿಸಿಕೊಂಡಿದ್ದ ಸಂಭಾಷಣೆಯನ್ನು ಕೇಳಿಸಿದಾಗ ಅವರು ಎದುರುದಾರರ ಧ್ವನಿಯನ್ನು ಗುರುತಿಸಿರುತ್ತಾರೆ.

ತನಿಖಾಧಿಕಾರಿಯವರು ದಿ: 06/11/2019 ಮತ್ತು 08/11/2019ರ ಸಂಭಾಷಣೆಯನ್ನು ಎದುರುದಾರರಿಂದ ಮತ್ತು ದೂರುದಾರರಿಂದ ಮೂರು ಬಾರಿ ಮಾತನಾಡಿಸಿ, ಆ ಸಂಭಾಷಣೆಯನ್ನು ಧ್ವನಿಮುದ್ರಿಸಿಕೊಂಡಿದ್ದು, ನಂತರ ಲ್ಯಾಪ್‌ಟಾಪ್‌ಗೆ ಅಳವಡಿಸಿ, ಆ ಸಂಭಾಷಣೆಯನ್ನು ಸಿ.ಡಿ.ಗಳಿಗೆ ವರ್ಗಾಯಿಸಿ, ಎದುರುದಾರರ ಮತ್ತು ದೂರುದಾರರ ಮಾದರಿ ಧ್ವನಿಗಳ ಸಿ.ಡಿ.ಗಳನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯವರು ಎದುರುದಾರರನ್ನು ದಸ್ತಗಿರಿ ಮಾಡಿ, ಇತರೆ ಕ್ರಮಗಳನ್ನು ಎಲ್ಲರ ಸಮಕ್ಷಮ ನಿರ್ವಹಿಸಿ, ಪ್ರಕರಣದ ವಿದ್ಯಮಾನಗಳನ್ನು ತಿಳಿಸಿ ಜಪ್ತಿ ಪಂಚನಾಮೆಯನ್ನು ನಿರ್ವಹಿಸಿರುತ್ತಾರೆ.

ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ತನಿಖಾಧಿಕಾರಿಯು ಎದುರುದಾರರಿಂದ ವಶಪಡಿಸಿಕೊಂಡ ಮುದ್ದೆಮಾಲುಗಳಲ್ಲಿ ಫಿನಾಪ್ತಲಿನ್ ಅಂಶವಿರುವುದು ಕಂಡುಬಂದಿರುತ್ತದೆ. ಆ ಕಾರಣ ಎದುರುದಾರರು ನೀಡಿದ ಸಮಜಾಯಿಷಿಯು ಸಮರ್ಪಕವಾಗಿರುವುದಿಲ್ಲ. ತನಿಖಾಧಿಕಾರಿಯು ಪಡೆದ ಸಾಕ್ಷಿದಾರರ ಹೇಳಿಕೆ, ತನಿಖಾ ದಾಖಲೆಗಳನ್ನು, ತಜ್ಞರ ವರದಿಯನ್ನು ಹಾಗೂ ಅಭಿಯೋಜನಾ ಮಂಜೂರಾತಿಯನ್ನು ಪಡೆದು ಎದುರುದಾರರ ವಿರುದ್ಧ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

3. ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಕೇಳಲಾಗಿತ್ತು. ಎದುರುದಾರರು ದಿ: 13/12/2021ರಂದು ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯಲ್ಲಿ ಪರಿವೀಕ್ಷಣಾ ಟಿಪ್ಪಣಿಯ ಎಲ್ಲಾ ಅಂಶಗಳನ್ನು ಅಲ್ಲಗಳೆದಿರುತ್ತಾರೆ ಮತ್ತು ಎದುರುದಾರರು ಅವರ ಸಮಜಾಯಿಷಿಯ ಪ್ಯಾರಾ-1ರಲ್ಲಿ ದೂರುದಾರರ ಪೋಡಿಗೆ ಸಂಬಂಧಿಸಿದಂತೆ ಯಾವುದೇ ಅಧಿಕಾರ ವ್ಯಾಪ್ತಿ ಮತ್ತು ಕರ್ತವ್ಯಗಳನ್ನು ವಹಿಸಿರುವುದಿಲ್ಲವೆಂದು ಹಾಗೂ ಯಾವುದೇ ಅರ್ಜಿಗಳನ್ನು ಸ್ವೀಕರಿಸಿರುವುದಿಲ್ಲ ಮತ್ತು ಗ್ರಾಮ ಲೆಕ್ಕಾಧಿಕಾರಿಯಾಗಿ ಸರ್ಕಾರದ ವಿವಿಧ ಯೋಜನೆಗಳ ಸೇವೆಗಳ ಬಗ್ಗೆ ಗ್ರಾಮಸ್ಥರಿಗೆ ಮಾಹಿತಿಯನ್ನು ಒದಗಿಸುವುದು ದೈನಂದಿನ ಸೇವಾ ಟಿಪ್ಪಣಿ ವಹಿಯ ಅನುಸಾರ ಕಾರ್ಯಗಳನ್ನು ನಿರ್ವಹಿಸುವುದು ಕರ್ತವ್ಯದ ಭಾಗವಾಗಿರುತ್ತದೆ ಎಂದು ಹೇಳಿರುತ್ತಾರೆ. ಆ ಕಾರಣಗಳಿಂದ ಇಲಾಖಾ ವಿಚಾರಣೆಯನ್ನು ಕೈಬಿಡಬೇಕೆಂದು ಕೋರಿರುತ್ತಾರೆ. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ತನಿಖಾಧಿಕಾರಿಯು ಎದುರುದಾರರಿಂದ ವಶಪಡಿಸಿಕೊಂಡ ಮುದ್ದೆಮಾಲುಗಳಲ್ಲಿ ಫಿನಾಪ್ತಲಿನ್ ಅಂಶವಿರುವುದು ಕಂಡುಬಂದಿರುತ್ತದೆ. ಆ ಕಾರಣದಿಂದ ಎದುರುದಾರರು ನೀಡಿದ ಸಮಜಾಯಿಷಿಯು ಸಮರ್ಪಕವಾಗಿರುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಮತ್ತು ಎದುರುದಾರರ ಸಮಜಾಯಿಷಿಯ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳಾಗಿ ಕಂಡುಬರುವುದಿಲ್ಲ.

4. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳು, ರಾಸಾಯನಿಕ ತಜ್ಞರ ಪರೀಕ್ಷಾವರದಿ ಹಾಗೂ ದೋಷಾರೋಪಣ ಪತ್ರದಲ್ಲಿರುವ ಮಾಹಿತಿಗಳಿಂದ ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಎದುರುದಾರರ ವಿರುದ್ಧ ನಡೆವಳಿಯನ್ನು ಕೈಬಿಡಲು ಸೂಕ್ತ / ಸಮಂಜಸ / ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

5. ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 2 (12) ರ ಪ್ರಕಾರ ಎದುರುದಾರರು ಸರ್ಕಾರಿ / ಸಾರ್ವಜನಿಕ ನೌಕರರಾಗಿದ್ದು, ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ನಿಷ್ಠೆ ತೋರಿಸದೆ ಭ್ರಷ್ಟಾಚಾರವೆಸಗಿ ಕ.ನಾ.ಸೇ. (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಎದುರುದಾರರ ವಿರುದ್ಧ ಇಲಾಖಾ ವಿಚಾರಣಾ ಮಾಡಲು ಕರ್ನಾಟಕ ನಾಗರಿಕ ಸೇವಾ –(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14(ಎ)ರಡಿ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ 12(3) ರಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ, ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

K.N. Phanindra 20/4/22

(ನ್ಯಾಯಮೂರ್ತಿ ಕೆ. ಎನ್. ಫಣೀಂದ್ರ)
ಉಪಲೋಕಾಯುಕ್ತರು-2,
ಕರ್ನಾಟಕ ರಾಜ್ಯ, ಬೆಂಗಳೂರು.